ನಿಮ್ಮೊಡನೆ

# ರಾಜಕಾರಣದ ಹೊಸ ಸಂಕಥನದಲ್ಲಿ ಹಿನ್ನೆಲೆಗೆ ಸರಿದ ಜನರ ಸಂಕಟಗಳು

ರಾಜಕೀಯ ಪಕ್ಷವೊಂದರ ನಿರ್ದಿಷ್ಟ ನಿಲುವಿನ ಸಾಧಕಬಾಧಕ ಒರೆಗೆ ಹಚ್ಚಲು ಈಗಿನ ಸಂದರ್ಭದಲ್ಲಿ ಅವಕಾಶವೇ ಇಲ್ಲವಾಗಿದೆ. ನಮ್ಮ ರಾಜಕಾರಣವು ಜನರ ಮೇಲೆ, ಒಳಿತೋ ಕೆಡುಕೋ ಒಂದನ್ನು ಅಪ್ಪಿಕೊಳ್ಳಲೇಬೇಕು ಎಂಬ ಪರೋಕ್ಷ ಒತ್ತಡ ಹೇರತೊಡಗಿದೆ. ಕೆಟ್ಟದ್ದನ್ನು ಕೆಟ್ಟದ್ದಲ್ಲ ಅಂತ ನಂಬಿಸುವ ಅಪಾಯಕಾರಿಯಾದ ಆಟ ಶುರುವಾಗಿದೆ.

ಮತ್ತೊಂದು ಮಹಾಚುನಾವಣೆ ಮನೆಬಾಗಿಲಲ್ಲಿ ನಿಂತಿದೆ. ರಾಜಕಾರಣಿಗಳ ಒಣ ಚೀರಾಟ, ಠೇಂಕಾರಗಳು ಕಿವಿಗೆ ಅಪ್ಪಳಿಸುತ್ತಿವೆ. ಇಂಡಿಯಾದ ಎಲ್ಲಾ 'ಬಿಕ್ಕಟ್ಟು'ಗಳಿಗೆ ತಮ್ಮ ಬಳಿ ಮಾತ್ರ ಪರಿಹಾರದ ಮಂತ್ರದಂಡ ಇದೆ ಎಂದು ನಂಬಿಸುವ ಆಟ ದೊಡ್ಡ ಮಟ್ಟದಲ್ಲಿ ನಡೆದಿದೆ. ಆದರೆ ಅವರು ಬಿಂಬಿಸುತ್ತಿರುವ ಬಿಕ್ಕಟ್ಟುಗಳು ಬಿಕ್ಕಟ್ಟುಗಳೇ ಅಲ್ಲ. ಹುಸಿ ಪ್ರಶ್ನೆಗಳನ್ನು ಎತ್ತಿ ಜನರನ್ನು ದಿಕ್ಕೆಡಿಸುವ ಕೆಲಸ ಮಾಡುತ್ತಿದ್ದಾರೆ. ನಮ್ಮ ಬದುಕನ್ನು ಅಸಹನೀಯಗೊಳಿಸುವ ವಾಸ್ತವಗಳನ್ನು ಮರೆಮಾಚುವ ಮತ್ತು ಜನರ ಮನಸ್ಸನ್ನು ಬೇರೆಡೆ ಹೊರಳಿಸುವ ವ್ಯವಸ್ಥಿತ ಪ್ರಯತ್ನಗಳಿವು. ಇದಕ್ಕೆ ಆ ಪಕ್ಷ ಈ ಪಕ್ಷ ಎಂಬ ಭೇದ ಇಲ್ಲ.

ಜನಪರವಾದ ಪ್ರಾಮಾಣಿಕ ಚಿಂತನೆ ಹಾಗೂ ರಾಜಕಾರಣದ ನಡುವಣ ಕೊಂಡಿ ಕಳಚಿಕೊಂಡು ವರ್ಷಗಳೇ ಉರುಳಿವೆ. ಒಳ್ಳೆಯತನ ಎಂಬುದು ರಾಜಕಾರಣದ ಪರಿಧಿಯಿಂದ ದೂರ ದೂರ ಸರಿಯುತ್ತಲೇ ಇದೆ. ತಮಗೆ ಬೇಡವಾದ ಒಳ್ಳೆಯತನ ಜನರಲ್ಲೂ ಇರಬಾರದು ಎಂಬಂತಿದೆ ನಾಯಕರು ಅನ್ನಿಸಿಕೊಂಡವರ ವರ್ತನೆ. ಜನರ ಒಳಗೆ ಹುದುಗಿರುವ ಒಳ್ಳೆಯತನಕ್ಕೆ ಮೊರೆಯಿಟ್ಟು ಅವರನ್ನು ಒಲಿಸಿಕೊಳ್ಳುವ ಪರಿಪಾಟ ಮಾಯವಾಗಿದೆ. ಜನರನ್ನು ದಾರಿ ತಪ್ಪಿಸಿ, ಆ ಮೂಲಕ ಸ್ವಾರ್ಥಸಾಧಿಸುವ ಸುಲಭದಾರಿಗಳನ್ನು ಕಂಡುಕೊಂಡಿದ್ದಾರೆ.

ನಮ್ಮ ಇಂದಿನ ರಾಜಕಾರಣವು ಆಯ್ಕೆಯ ಅವಕಾಶಗಳನ್ನೇ ಕನಿಷ್ಠಗೊಳಿಸಿದೆ. ಕೆಟ್ಟದ್ದರಲ್ಲಿ ಕಡಿಮೆ ಕೆಟ್ಟದ್ದನ್ನು ಆರಿಸಿಕೊಂಡು ಸಮಾಧಾನಪಡುವ ಸ್ಥಿತಿಗೆ ಜನ ತಲುಪಿದ್ದರು. ಮತಗಟ್ಟೆಗೆ ಬರಲು ಅಂತಹದೊಂದು ಸಮಾಧಾನ ಹೇತುವಾಗಿತ್ತು. ಅದನ್ನೂ ಕಸಿಯುವ ಹುನ್ನಾರಗಳು ಗೋಚರಿಸಲಾರಂಭಿಸಿವೆ. ಒಳ್ಳೆಯದು, ಕೆಟ್ಟದ್ದರಲ್ಲಿ ಆಯ್ಕೆಯ ಪ್ರಶ್ನೆಯೇ ಇಲ್ಲ. 'ನಾವಷ್ಟೇ ಒಳ್ಳೆಯವರು. ಉಳಿದವರೆಲ್ಲರೂ ಕೆಟ್ಟವರು' ಎಂದು ನಂಬಿಸಲಾರಂಭಿಸಿದ್ದಾರೆ. ಇದನ್ನು ಹೀಗೂ ಹೇಳಬಹುದು. 'ನಮ್ಮ ಪಕ್ಷ ಮಾತ್ರ ಒಳ್ಳೆಯದು. ಉಳಿದ ಎಲ್ಲಾ ಪಕ್ಷಗಳು ಕೆಟ್ಟವು' ಎಂಬ ಸಂಕಥನ ಕಟ್ಟತೊಡಗಿದ್ದಾರೆ. ಅದನ್ನು ನಂಬುವಂತೆ ಜನರ ಮನಸ್ಸನ್ನು ಹದಗೊಳಿಸುವ ಕೆಲಸ ಸಾಗಿದೆ.

'ಈ ದೇಶದಲ್ಲಿ ಇಲ್ಲಿಯವರೆಗೆ ಏನೆಲ್ಲಾ ಒಳಿತಾಗಿದೆಯೋ ಅದು ನಮ್ಮಿಂದಲೇ ಆಗಿದೆ' ಎಂದು ಒಂದು ಪಕ್ಷ ಹೇಳಿಕೊಳ್ಳುತ್ತಿದೆ. 'ಈ ದೇಶದ ಸಮಸ್ತ ಕೆಡುಕುಗಳಿಗೂ ಸುದೀರ್ಘ ಅವಧಿಗೆ ನಮ್ಮನ್ನು ಆಳಿದ ಪಕ್ಷದ ಕೆಟ್ಟ ನೀತಿಗಳೇ ಕಾರಣ' ಎಂದು ಮತ್ತೊಂದು ಪಕ್ಷ ದೂರುತ್ತಿದೆ. ಇವರೆಡೂ ವಾದಗಳು ಅರ್ಧಸತ್ಯದಿಂದ ಕೂಡಿವೆ. ಸತ್ಯ ಈ ಎರಡರ ನಡುವೆ ಎಲ್ಲೋ ಹುದುಗಿದೆ. ಆದರೆ ಅವರವರ ಗ್ರಹಿಕೆಗೆ ತಕ್ಕಂತೆ ಅದನ್ನು ಕಂಡುಕೊಳ್ಳುವ ಯೋಚನಾಮಾರ್ಗಗಳನ್ನು ಮುಚ್ಚಲು ಯತ್ನಿಸುತ್ತಿದೆ ಇಂದಿನ ರಾಜಕಾರಣ. ಆಲೋಚನಾಶಕ್ತಿಯನ್ನು ಕುಂದಿಸುವ ಇಂತಹ ಆಟಗಳು ದೂರಗಾಮಿ ಪರಿಣಾಮಗಳನ್ನು ಹೊಂದಿವೆ ಎಂಬುದನ್ನು ಜನಸಾಮಾನ್ಯರಿಗೆ ಮನವರಿಕೆ ಮಾಡಿಕೊಡುವುದು ಇಂದಿನ ತುರ್ತು ಅಗತ್ಯ. ಆದರೆ ಅದು ಕ್ಷಣಾರ್ಧದಲ್ಲಿ ಆಗುವ ಕೆಲಸ ಅಲ್ಲ. ಅದಕ್ಕೆ ಸಮಯ ಹಿಡಿಯುತ್ತದೆ.



ಈಶ್ವರ

ರಾಜಕೀಯ ಪಕ್ಷವೊಂದರ ನಿರ್ದಿಷ್ಟ ನಿಲುವಿನ ಸಾಧಕಬಾಧಕ ಒರೆಗೆ ಹಚ್ಚಿ, ಅದು ಅಪಾಯಕಾರಿಯೋ, ಅಪಕ್ವವೋ, ಭರವಸೆದಾಯಕವೋ ಎಂಬುದರ ಬಗ್ಗೆ ನಿರ್ಧಾರಕ್ಕೆ ಬರಬೇಕು. ಆದರೆ ಈಗಿನ ಸಂದರ್ಭದಲ್ಲಿ ಅದಕ್ಕೆ ಅವಕಾಶವೇ ಇಲ್ಲವಾಗಿದೆ. ನಮ್ಮ ರಾಜಕಾರಣವು ಜನರನ್ನು ಎರಡು ತುತ್ತ ತುದಿಗಳಿಗೆ ಸರಿಸಿದೆ. ಒಳಿತೋ ಕೆಡುಕೋ ಒಂದನ್ನು ಅಪ್ಪಿಕೊಳ್ಳಲೇಬೇಕು ಎಂಬ ಪರೋಕ್ಷ ಒತ್ತಡ ಹೇರತೊಡಗಿದೆ. ಕೆಟ್ಟದ್ದನ್ನು ಕೆಟ್ಟದ್ದಲ್ಲ ಅಂತ ನಂಬಿಸುವ ಅಪಾಯಕಾರಿಯಾದ ಆಟ ಶುರುವಾಗಿದೆ. ಇದನ್ನು ಒಂದು ರೀತಿ ಮಾನಸಿಕ ಯುದ್ಧ ಅಂತ ಕೂಡ ಭಾವಿಸಬಹುದು. ಏನೇ ಮಾಡಿದರೂ ದಕ್ಕಿಸಿಕೊಳ್ಳಬಹುದು ಎಂಬ ಸ್ಥಿತಿ ಒದಗುವುದು ಇದೆಯಲ್ಲ, ಅದು ಪ್ರಜಾಪ್ರಭುತ್ವಕ್ಕೆ ಅತ್ಯಂತ ಮಾರಕವಾದುದು. ಇಂತಹವರಿಗೆ ವೋಟು ಹಾಕದಿದ್ದರೆ ನೀನು ಇಂತಹವನು ಎಂಬ ಹಣೆಪಟ್ಟಿ ಅಂಟಿಸುವುದಲ್ಲದೆ, ಹಾಗೆ ಬ್ರ್ಯಾಂಡ್ ಮಾಡುವುದು ಕೂಡ ಸರಿ ಎಂದು ಒಪ್ಪಿಸುವಂತಹ ನಡೆ ಅಪಾಯಕಾರಿಯಾದುದು.

ದೇಶದ ಅರ್ಧಭಾಗ ಬರಗಾಲಕ್ಕೆ ತುತ್ತಾಗತೊಡಗಿದೆ. ಉದ್ಯೋಗಾವಕಾಶಗಳು ಹೊಸದಾಗಿ ಸೃಷ್ಟಿಯಾಗುತ್ತಿಲ್ಲ. ಈ ದೇಶವನ್ನು ಪೊರೆದ ಸಹಿಷ್ಣುತೆಗೆ ಎಲ್ಲೋ ಭಂಗ ಉಂಟಾಗಿದೆ. ಅಸಹನೆ ತಾಂಡವವಾಡುತ್ತಿದೆ. ಸಾಂವಿಧಾನಿಕ ಸಂಸ್ಥೆಗಳ ಸಾಯತ್ತೆ ಕಾಪಾಡುವ ಜರೂರು ಇದೆ. ಚುನಾವಣಾ ಪ್ರಚಾರದ ವೇಳೆ ಇಂತಹ ಮಹತ್ವದ ವಿಷಯಗಳು ಚರ್ಚೆಗೆ ಒಳಗಾಗಬೇಕು. ಅವುಗಳನ್ನು ಮುನ್ನೆಲೆಗೆ ತರುವಂತೆ ಮತದಾರರು ಒತ್ತಡ ಹೇರಬೇಕಾಗಿದೆ.

ಏಮಾರಿಸುವ ಕಲೆ ರಾಜಕಾರಣಿಗಳಿಗೆ ಸಿದ್ಧಿಸಿದಷ್ಟು ಬೇರೆ ಯಾರಿಗೂ ಸಿದ್ಧಿಸಿರಲಾರದು. ಎಚ್ಚರ ಕಾಯ್ದುಕೊಳ್ಳುವ ಗುರುತರ ಹೊಣೆಗಾರಿಕೆ ಮತದಾರರ ಮೇಲಿದೆ. ವಿವೇಚನಾಶಕ್ತಿಯ ಕೀಲಿಕೈ ನಿಮ್ಮ ಕಿಸೆಯಲ್ಲೇ ಇರಲಿ.

■ ಎನ್. ಉದಯಕುಮಾರ್